**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ**
**ಅಂಕೋಲಾ**

**ಸಿಸಿ ನಂಬರ 27/2025**

ಆರೋಪಿಯ ಹೆಸರುಃ ಸುಭಾಶ
ತಂದೆ ಹೆಸರುಃ ಗಂಗಾಧರ ನಾಯ್ಕ
ವಯಸ್ಸುಃ 38 ವರ್ಷ
ಉದ್ಯೋಗಃ ವ್ಯವಹಾರ
ವಿಳಾಸಃ ಸಾಃ ಕೇಣಿರೋಡ, ಹೊನ್ನೆಕೇರಿ, ತಾಃ ಅಂಕೋಲಾ

**ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆ**

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?
ಉತ್ತರಃ

ಪ್ರ 2ಃ ಫಿರ್ಯಾದಿ ಪಿಡಬ್ಲ್ಯೂ 1- ರಾಮಮೂರ್ತಿ ಪ್ರಮೋದ ನಾಯಕ, ಸಾಲ ವಸೂಲಾತಿ ಅಧಿಕಾರಿ, ಸುಪ್ರಭಾತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಶಾಖೆಃ ಅಂಕೋಲಾ, ಇವರು ತಮ್ಮ ಸಾಕ್ಷಿಯಲ್ಲಿ ಆರೋಪಿಯು ದಿಃ 07-12-2022 ರಂದು ಫಿರ್ಯಾದಿ ಸಂಸ್ಥೆಯಿಂದ ವ್ಯವಹಾರದ ಸಲುವಾಗಿ ರೂ.15,30,000/- ಸಾಲವನ್ನು ಪಡೆದಿದ್ದು ಇರುತ್ತದೆ. ಆರೋಪಿ ಮತ್ತು ಜಾಮೀನುದಾರರು ಒಪ್ಪಿ ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿರುತ್ತಾರೆ. ಸದರಿ ಸಾಲದ ಕರಾರುಗಳ ಪ್ರಕಾರ ಅಸಲು ಮತ್ತು ಬಡ್ಡಿ ಸೇರಿ ರೂ. 19,12,200/- ಹಣ ತುಂಬುವುದು ಬಾಕಿ ಇದ್ದಾಗ, ಜಾಮೀನುಗಾರನಾದ ಆರೋಪಿ ದಿನಾಂಕಃ 24-09-2024 ರಂದು ತಾನು ಕೆನರಾ ಬ್ಯಾಂಕ್, ಶಾಖೆಃ ಅಂಕೋಲಾ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 182931 ನ್ನು ರೂ.19,12,200/-ಕ್ಕೆ ನೀಡಿರುತ್ತಾನೆ. ಸದರಿ ಆರೋಪಿ ನೀಡಿದ ಚೆಕ್ಕು ಖಾತೆಯಲ್ಲಿ

" **Funds Insufficient**" ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3ಃ ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4ಃ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀರಾ ?

ಉತ್ತರಃ

( ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಆತನಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 17/05/2025

**( ಅರ್ಪಿತಾ ಬಿ. ಬೆಲ್ಲದ)**

**ಹೆ. ಪ್ರ ದ ನ್ಯಾದಂ, ಅಂಕೋಲಾ.**